

## ಮರ ಗುಲಾಬಿಯ ನೋಡಿದಿರಾ!

ಮುಳ್ಳುಗಳ ನಡುವೆ ಸೌಂದರ್ಯದ ನಗೆ ಬೀರುವ ಹೂವುಗಳ ರಾಣಿ ಗುಲಾಬಿ, ಕಷ್ಟ ಸುಖ, ಸಿಹಿ ಕಹಿ ಸಮವೆಲ್ಲ ಬಾಳಿಗೆ ಎಂಬ ತತ್ವ ಸಾರುವ ಪ್ರತೀಕವಾಗಿ ಪ್ರಸಿದ್ಧ. ಸಣ್ಣ ಪೊದೆಯಂತೆ, ಗಿಡಗಳಲ್ಲಿ , ಬಳ್ಳಿಯಂದದಿ ಹಬ್ಬುವ ಗೊಂಚಲು ಹೂ ಬಿಡುವ ಗುಲಾಬಿ ಗಿಡಗಳು ಬಹುತೇಕ ಕಾಣಸಿಕ್ಕುತ್ತವೆ. ಆದರೆ ಮರವಾಗಿ ಬೆಳೆದು, ಗೊಂಚಲು ಹೂ ಬಿಡುವ ಮರ ಗುಲಾಬಿ ಕಾಣ ಸಿಕ್ಕುವುದು ವಿರಳ. ಚಿತ್ರದಲ್ಲಿ ಕಂಡು ಬರುವ ಮರಗುಲಾಬಿ ಸುಮಾರು 12 ಅಡಿಗಳಿಗಿಂತಲೂ ಎತ್ತರವಾಗಿದ್ದು ಕಾಂಡಕ್ಕೆ ಅಂಟಿಕೊಂಡಂತೆ ಬಿಳಿ ಹೂ ಗೊಂಚಲುಗಳಿಂದ ನಳನಳಿಸುತ್ತಿದೆ.

–ಎಸ್.ಎನ್. ಚಂದ್ರಕಲಾ ಕೊಪ್ಪ, ಕೊಪ್ಪ





## ಟಪಾಲು ವಿಭಾಗದ ಮೇಜು

ಈಗೆಲ್ಲ ಯಾವುದೇ ಕಚೇರಿಯ ಯಾವುದೇ ವಿಭಾಗದ ಒಳಹೊಕ್ಕರು ಮೇಜಿನ ಮೇಲೆ ಕಂಪ್ಯೂಟರ್ ಕಾಣುವುದು ಸರ್ವೇಸಾಮಾನ್ಯ. ಆದರೆ ಹಿಂದೆ ಹೀಗೆ ಇರಲಿಲ್ಲ. ಅದು ಅಲ್ಲದೆ ಕಚೇರಿಗಳ ಟಪಾಲು ವಿಭಾಗದಲ್ಲಿ ಇಡುತ್ತಿದ್ದ ಮೇಜನ್ನು ವಿಶೇಷವಾಗಿ ರೂಪಿಸಲಾಗುತ್ತಿತ್ತು. ಮೇಜಿನ ಮೇಲೆ ಸಣ್ಣದಾದ ಒಂದು ಕಪಾಟು ಅದರಲ್ಲಿ ಕೆಲ ಖಾನೆಗಳು(ಗೂಡುಗಳು), ಟಪಾಲುಗಳನ್ನು ಅವು ಸಲ್ಲಬೇಕಾದ ಇಲಾಖೆ ಮತ್ತು ಊರುಗಳ ಮೇಲೆ ವರ್ಗೀಕರಿಸಿ ಅವುಗಳಿಗೆ ಮೀಸಲಿಟ್ಟ ಖಾನೆಗಳಿಗಲ್ಲಿ ಇಡಲಾಗುತ್ತಿತ್ತು. ಆ ಮೇಜುಗಳಿಗೆ ತನ್ನದೇ ಆದ ಒಂದು ಗತ್ತು ಇತ್ತು. ಈಗ ಈ ತರಹದ ಮೇಜುಗಳು ಕಾಣಸಿಗುವುದೇ ಕಷ್ಟ. ಮೊನ್ನೆ ನಮ್ಮೂರ ತಾಲ್ಲೂಕು ಕಚೇರಿಗೆ ಭೇಟಿಕೊಟ್ಟಾಗ ಕಚೇರಿಯ ಆವರಣದ ಒಂದು ಬದಿಯಲ್ಲಿ ಈ ಮೇಜನ್ನು ಅನುಪಯುಕ್ತ ಎಂದು ಇಟ್ಟಿದ್ದರು.

–ಅಂಜನ್ ಕಾಯ್ಕಿಣಿ, ಸಾಗರ